The total number of murders, dacoities, robbberies, dowary deaths, occured in the Police limit of KGF during the year 1990 and 1991 and the number of cases that have been registered, action taken/detected and also convicated?

Shri DHARAM SINGH (Home Minister) :

1) Cases reported and registered.

	Murder	*Dacoity*	*Robbery*	*Dowry Deaths*
1990	19	-	3	2
1991	16	9	6	1
31.8.91				

Action Tatken:

1990	*Rep*	*Persons Arrested*	*Convicted*	*PT*	*UI*	*O/D*
Murders	19	12	-	12	3	4
Dacoity	-	-	-	-	-	-
Robberies	3	3	-	1	2	-
Dowry Deaths	2	8	-	2	-	-
1991						
Murders	16	11	-	5	9	2
Dacoity	9	41	-	8	1	-
Robberies	-	-	-	-	-	-
Dowry Deasths	1	4	-	1	-	-

ಕಾವೇರಿ 4ನೇ ಹಂತಕ್ಕೆ ಅಂದಾಜು ವೆಚ್ಚ

3113 - ಶ್ರೀ ಪೆರಿಕಾಲ್ ಎಂ.ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ಕಾವೇರಿ 4ನೇ ಹಂತದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ವೆಚ್ಚವೆಷ್ಟು?

ಇ) 4ನೇ ಯೋಜನೆಯಲ್ಲಿ ದಿನಂಪ್ರತಿ ಎಷ್ಟು ಹೆಚ್ಚುವರಿ ನೀರು ದೊರೆಯುತ್ತದೆ?

ಈ) ವಿಶ್ವ ಬ್ಯಾಂಕ್‌ನ ನೆರವು ಪಡೆಯಲು ಪ್ರಸ್ತಾವನೆ ಏನಾದರೂ ಇದೆಯೆ?

ಉ) ಹಾಗಿದ್ದಲ್ಲಿ ಸರ್ಕಾರವು ಈ ದಿಶೆಯಲ್ಲಿ ಕೈಗೊಂಡಿರುವ ಕ್ರಮವೇನು?

ಊ)ಯೋಜನಾ ಆಯೋಗವು ಇದಕ್ಕೆ ಅನುಮತಿ ನೀಡಿದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) 1000 ಕೋಟಿ ರೂಪಾಯಿಗಳು.

ಇ) ದಿನಂಪ್ರತಿ 540 ದಶಲಕ್ಷ ಲೀಟರು.

ಈ) ಕಾವೇರಿ ನೀರು ಸರಬರಾಜು ಯೋಜನೆ 4ನೇ ಹಂತಕ್ಕೆ ವಿಶ್ವಬ್ಯಾಂಕ್‌ನಿಂದ ನೆರವು ಪಡೆಯಲು ಯೋಜಿಸಿದ್ದು ಇದುವರೆಗೆ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) 4ನೇ ಯೋಜನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಉದ್ದೇಶಿಸಲಾಗಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಕೃಷ್ಣ ರಾಜೇಂದ್ರ ಮಾರುಕಟ್ಟೆಯ ನವೀಕರಣ.

3112 - ಶ್ರೀ ಪೆರಿಕಾಲ್ ಎಂ.ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ನವೀಕರಣಕ್ಕಾಗಿ ಇಲ್ಲಿಯವರೆವಿಗೂ ಖರ್ಚುಮಾಡಿದ ಹಣವೆಷ್ಟು?

ಆ) 1991-92ರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ?

ಇ) ಈ ಮಾರುಕಟ್ಟೆಯ ನವೀಕರಣ ಯಾವಾಗ ಮುಗಿಯುತ್ತದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ರೂ. 430.50 ಲಕ್ಷ.

ಆ) ರೂ. 240.00 ಲಕ್ಷ.

ಇ) 1993-94ನೇ ಸಾಲಿನಲ್ಲಿ.

ರಾಜ್ಯದಲ್ಲಿ ವೀಡಿಯೋ ಪಾರ್ಲರ್‌ಗಳಿಗೆ ಪರವಾನಗಿ ನೀಡುವುದು.

3118 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವೀಡಿಯೋ ಪಾರ್ಲ್ರ್‌ಗಳಿಗೆ ನೀಡಲಾಗಿರುವ ಪರವಾನಗಿಗಳೆಷ್ಟು?

ಆ) ಸದರಿ ಪರವಾನಗಿಯನ್ನು ನೀಡಲು ಅಧಿಕಾರವನ್ನು ಯಾವ ಪ್ರಾಧಿಕಾರವು ಹೊಂದಿದೆ.

ಇ) ಸದರಿ ಪರವಾನಗಿಯನ್ನು ನೀಡಲು ನಿಗದಿಪಡಿಸಿರುವ ಮಾರ್ಗ ಸೂಚಿಗಳಾವುವು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)

ಅ) 237

ಆ) ಜಿಲ್ಲಾ ದಂಡಾಧಿಕಾರಿಗಳು.

ಇ) ವಿ.ಸಿ.ಆರ್ ಮೂಲಕ ಟಿ.ವಿ. ಪರದೆಯ ಮೇಲೆ ಚಲನಚಿತ್ರ ಪ್ರದರ್ಶಿಸುವ ಬಗ್ಗೆ ಕರ್ನಾಟಕದ 1984ರ (ನಿಯಂತ್ರಣ) ನಿಯಮಗಳು.